## ನಿಮ್ಮೊಡನೆ

# ಹಸೆಮಣೆಯಲ್ಲಿ ದುಡುಕುವುದೇಕೆ?

ಮದುವೆಯ ಮಾಡಿ ಸಾಗಹಾಕುವ ಹೆತ್ತವರ ಅವಸರದಲ್ಲಿ ಹೆಣ್ಣುಮಕ್ಕಳ ಕನಸುಗಳು ಕಿಮ್ಮತ್ತು ಕಳೆದುಕೊಳ್ಳುತ್ತವೆ. ತನ್ನ ಮದುವೆಯ ಬಗ್ಗೆ ಹೆಣ್ಣೊಬ್ಬಳು ನಿರ್ಧಾರ ತೆಗೆದುಕೊಳ್ಳುವುದನ್ನು ಆಕ್ಷೇಪದಿಂದ ನೋಡುವ ಪರಿಪಾಠವೂ ಇದೆ. ಮಗಳ ಶಿಕ್ಷಣಕ್ಕೂ ಮದುವೆಯ ಮುಹೂರ್ತ ಕೂಡಿಬರುವ ಕಾಲಕ್ಕೂ ತಾಳೆ ಹಾಕುವ ಪೋಷಕರೂ ಇದ್ದಾರೆ.

ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ ಪ್ರಸಂಗಗಳು ನಾಗರಿಕ ಸಮಾಜವನ್ನು ದಿಗಿಲುಗೊಳಿಸುವ ಪ್ರಮಾಣದಲ್ಲಿ ವರದಿಯಾಗುತ್ತಿವೆ. ಇನ್ನೊಂದು ತುದಿಯಲ್ಲಿ, ಹಸೆಮಣೆಯಿಂದ ವಧು ಎದ್ದು ಹೋಗುವ ವಿಲಕ್ಷಣ ಘಟನೆಗಳೂ ಈಚಿನ ದಿನಗಳಲ್ಲಿ ಹೆಚ್ಚು ವರದಿಯಾಗುತ್ತಿವೆ. ಅತ್ಯಾಚಾರದಂತಹ ಅಮಾನವೀಯ ಘಟನೆಗಳೊಂದಿಗೆ ಹಸೆಮಣೆ ಬಿಟ್ಟೇಳುವ ವಧುವಿನ ನಡವಳಿಕೆಯನ್ನು ಹೋಲಿಸುವುದು ಅಷ್ಟೇನೂ ಔಚಿತ್ಯಪೂರ್ಣವಲ್ಲ. ಆದರೆ, ಈ ನಡವಳಿಕೆಯ ಹಿಂದೆ ಹೆಣ್ಣಿನ ಮೇಲೆ ಇರಬಹುದಾದ ಒತ್ತಡವನ್ನು ಗಮನಿಸಬೇಕಾಗಿದೆ.

ಮದುವೆಗೆ ಹೆಣ್ಣಿನ ಸಮ್ಮತಿಯೂ ಅಗತ್ಯ ಎನ್ನುವ ಧೋರಣೆ ಗ್ರಾಮೀಣ ಭಾಗಗಳಲ್ಲಿ ಇನ್ನೂ ಅಷ್ಟಾಗಿ ಚಾಲ್ತಿಗೆ ಬಂದಿಲ್ಲ. ಮನೆಯ ಹಿರಿಯರೇ ತಮ್ಮ ಮಗಳ ಪರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಪ್ರದರ್ಶನದ ಗೊಂಬೆಯಾಗಿಯಷ್ಟೇ ವಧು ಬಳಕೆಯಾಗುತ್ತಾಳೆ. ಆಕೆಯ ಮನಸ್ಸಿನ ಹೊಯ್ದಾಟಗಳನ್ನು, ಬೇಕು ಬೇಡಗಳನ್ನು ಗಮನಿಸುವ ವ್ಯವಧಾನ ಯಾರಿಗೂ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಕೆಲವು ಹೆಣ್ಣುಮಕ್ಕಳ ಸಹನೆ ಮದುವೆ ಮಂಟಪದಲ್ಲಿ ಬಂಡಾಯವಾಗಿ ಸ್ಫೋಟಿಸುತ್ತಿರುವುದರ ಪರಿಣಾಮವನ್ನು, ಕೊನೆಕ್ಷಣದಲ್ಲಿ ಮದುವೆ ಮುರಿದುಕೊಳ್ಳುತ್ತಿರುವ ಪ್ರಸಂಗಗಳಲ್ಲಿ ನೋಡಬಹುದು.

ಹಸೆಮಣೆಯಲ್ಲಿ ಬಂಡೇಳುವ ಹೆಣ್ಣುಮಕ್ಕಳ ನಡವಳಿಕೆಯಿಂದ ಆಕೆಯ ಕುಟುಂಬ ವರ್ಗ ಮಾತ್ರವಲ್ಲದೆ, ವರನ ಬಳಗವೂ ಮಾನಸಿಕ ಕ್ಷೋಭೆಗೆ ಒಳಗಾಗುವುದು ಸಹಜ. ಈ ಅನಿರೀಕ್ಷಿತ ತಿರುವುಗಳು ಎರಡು ಕುಟುಂಬ ವರ್ಗಗಳ ನಡುವಿನ ಘರ್ಷಣೆಗೆ ಕಾರಣವಾದ ಉದಾಹರಣೆಗಳೂ ಇವೆ. ವಧುವಿನ ನಿರಾಕರಣೆಯಿಂದ ಕೆಲವು ತರುಣರು ಮಾನಸಿಕವಾಗಿ ಘಾಸಿಗೊಂಡಿದ್ದಿದೆ. ವಧುವಿನ ಹೆತ್ತವರಂತೂ ಆರ್ಥಿಕವಾಗಿ ನಷ್ಟ ಅನುಭವಿಸುವುದರ ಜೊತೆಗೆ ಸಾರ್ವಜನಿಕರ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ವಧುವಿನ ನಿರಾಕರಣೆಯನ್ನು ಏಕಪಕ್ಷೀಯವಾಗಿ ದೂರಲಾಗುತ್ತದೆ. ಕೊನೆಯ ಕ್ಷಣದವರೆಗೂ ಮೌನವಾಗಿರುವ ವಧು, ಅಂತಿಮ ಹಂತದಲ್ಲಿ ನಿಲುವು ಬದಲಿಸುವ ಧೋರಣೆ ಕಟು ಟೀಕೆಗೆ ಒಳಗಾಗುತ್ತದೆ. ಇದೆಲ್ಲವೂ ಆ ಕ್ಷಣಕ್ಕೆ ವ್ಯಕ್ತವಾಗುವ ಸಹಜ ಪ್ರತಿಕ್ರಿಯೆಗಳೇ ಆಗಿವೆ. ಆದರೆ, ಹೀಗೆ ಕೊನೆ ಕ್ಷಣದಲ್ಲಿ ಮದುವೆ ಮುರಿದುಕೊಳ್ಳುವ ಹೆಣ್ಣುಮಕ್ಕಳ ಮನಸ್ಥಿತಿಯನ್ನು ನಾವು ಇನ್ನಷ್ಟು ಸಹಾನುಭೂತಿಯಿಂದ ನೋಡಬೇಕಾದ ಅಗತ್ಯವಿದೆ.  ಮದುವೆಯ ಹಿನ್ನೆಲೆಯಲ್ಲಿ ಹುಡುಗಿಯರಿಗೆ ಇರುವ ಸ್ವಾತಂತ್ರ್ಯ ಮತ್ತು ಅವರ ಮೇಲಿನ ಕಟ್ಟುಪಾಡುಗಳು ಈ ಸಹಾನುಭೂತಿಯ ನೋಟಕ್ಕೆ ಕಾರಣವಾಗಿವೆ.

ಮದುವೆಯ ಮಾಡಿ ಸಾಗಹಾಕುವ ಹೆತ್ತವರ ಅವಸರದಲ್ಲಿ ಹೆಣ್ಣುಮಕ್ಕಳ ಕನಸುಗಳು ಕಿಮ್ಮತ್ತು ಕಳೆದುಕೊಳ್ಳುತ್ತವೆ. ತನ್ನ ಮದುವೆಯ ಬಗ್ಗೆ ಹೆಣ್ಣೊಬ್ಬಳು ನಿರ್ಧಾರ ತೆಗೆದುಕೊಳ್ಳುವುದನ್ನು ಆಕ್ಷೇಪದಿಂದ ನೋಡುವ ಪರಿಪಾಠವೂ ಇದೆ. ಮಗಳ ಶಿಕ್ಷಣಕ್ಕೂ ಮದುವೆಯ ಮುಹೂರ್ತ ಕೂಡಿಬರುವ ಕಾಲಕ್ಕೂ ತಾಳೆ ಹಾಕುವ ಪೋಷಕರೂ ಇದ್ದಾರೆ. ಈ ಎಲ್ಲ ಕಾರಣಗಳಿಂದಾಗಿ, ಮದುವೆ ಎನ್ನುವುದು ಹೆಣ್ಣಿಗೆ ಬಲವಂತದ ಸಂಭ್ರಮವಾಗಿ ಪರಿಣಮಿಸುವ ಸಾಧ್ಯತೆ ಇಲ್ಲದಿಲ್ಲ. ಇಂತಹ ಸಂದರ್ಭದಲ್ಲಿ ಹಸೆಮಣೆಯಿಂದ ಹೆಣ್ಣು ಎದ್ದರೆ, ಆ ನಡವಳಿಕೆಯ ಹಿಂದೆ ಆಕೆಯ ಕುಟುಂಬ ವರ್ಗದ ಅಪ್ರಬುದ್ಧತೆಯೂ ಇರುತ್ತದೆ. ಇಂತಹ ಕಠಿಣ ಸಂದರ್ಭಗಳನ್ನು ನಾಜೂಕಾಗಿ ಪರಿಹರಿಸುವ ಜಾಣ್ಮೆಯೂ ಬಹುತೇಕ ಹೆಣ್ಣುಮಕ್ಕಳಲ್ಲಿ ಇರುವುದಿಲ್ಲ. ಅಂತಹ ಒಂದು ತಿಳಿವಳಿಕೆಯನ್ನು ಅವರಿಗೆ ನೀಡುವ ಅಗತ್ಯವೂ ಪೋಷಕರಿಗೆ ಕಾಣಿಸುವುದಿಲ್ಲ. ಇದರಿಂದಾಗಿ ಉಂಟಾಗುವ ವಿವೇಕದ ಕೊರತೆಯೂ ದುಡುಕಿಗೆ, ದುರಂತಕ್ಕೆ ಕಾರಣವಾಗುತ್ತದೆ. ಮದುವೆ ಒಲ್ಲೆನೆಂದ ಮೇಲೆ ಮುಂದೇನು ಮಾಡಬೇಕೆನ್ನುವ ವಿವೇಚನೆಯೂ ಅನೇಕ ಹೆಣ್ಣುಮಕ್ಕಳಿಗೆ ಇರುವುದಿಲ್ಲ.

ಮಕ್ಕಳಿಗೆ ಯೋಗ್ಯ ಶಿಕ್ಷಣ ನೀಡುವುದು ಎಲ್ಲ ಪೋಷಕರ ಕರ್ತವ್ಯ. ಈ ಕರ್ತವ್ಯ ನಿರ್ವಹಣೆಯ ನಿಟ್ಟಿನಲ್ಲಿ ಮಗ ಅಥವಾ ಮಗಳು ಎನ್ನುವ ಭೇದಕ್ಕೆ ಅರ್ಥವೇ ಇಲ್ಲ. ಹೆಣ್ಣುಮಕ್ಕಳ ಶಿಕ್ಷಣದೊಂದಿಗೆ ಸಮಾಜದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಒದಗುತ್ತದೆ ಎನ್ನುವ ಮಾತು ಆಕೆಯ ವೈಯಕ್ತಿಕ ಬದುಕಿಗೂ ಅನ್ವಯಿಸುತ್ತದೆ. ಒಳ್ಳೆಯ ಶಿಕ್ಷಣ ಪಡೆಯುವ ಹೆಣ್ಣಿನ ವ್ಯಕ್ತಿತ್ವ ಗಟ್ಟಿಗೊಳ್ಳುವುದರ ಜೊತೆಗೆ ಆಕೆ ತನ್ನ ಬದುಕಿಗೆ ಸೂಕ್ತವಾದ ನಿರ್ಣಯಗಳನ್ನು ಸಕಾಲದಲ್ಲಿ ಕೈಗೊಳ್ಳಲು ಸಮರ್ಥಳಾಗುತ್ತಾಳೆ. ಇಂಥದೊಂದು ಸಾಮರ್ಥ್ಯವನ್ನು ನಮ್ಮ ಹೆಣ್ಣುಮಕ್ಕಳು ಹೊಂದಬೇಕಾದ ಪರಿಸ್ಥಿತಿಯನ್ನು ಪೋಷಕರೂ ಸಮಾಜವೂ ಕಲ್ಪಿಸಬೇಕಾದುದು ಇಂದಿನ ತುರ್ತುಗಳಲ್ಲಿ ಒಂದಾಗಿದೆ.

ಮದುವೆ ಬದುಕಿನ ಒಂದು ಅರ್ಥಪೂರ್ಣ ಘಟ್ಟ. ಇದು ಒಂದು ದಿನದ ಅಥವಾ ಒಂದು ಸಂದರ್ಭದ ಪ್ರಕ್ರಿಯೆ ಆಗಿರದೆ, ಜೀವನವಿಡೀ ಕಾಪಾಡಿಕೊಳ್ಳಬೇಕಾದ ಜವಾಬ್ದಾರಿ. ಇಂತಹ ಮಹತ್ವದ ಜವಾಬ್ದಾರಿಯ ನಿರ್ವಹಣೆಗೆ ತರುಣ ತರುಣಿಯರನ್ನು ಮಾನಸಿಕವಾಗಿ ಸಜ್ಜುಗೊಳಿಸುವ ವ್ಯವಸ್ಥೆಯ ಬಗ್ಗೆಯೂ ನಮ್ಮ ಗಮನ ಹರಿಯಬೇಕಾಗಿದೆ.

■ ರಘುನಾಥ ಚ.ಹ.

